ವಿಷಯ : ಬೆಂಗಳೂರು ನಗರದಲ್ಲಿ ಪೆಟ್ರೋಲ್ ಬಂಕ್‌ಗಳಲ್ಲಿ ಪಡೆಯುತ್ತಿರುವ ಕಲಬೆರಕೆ

1500 (2214)-ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿ ಪೆಟ್ರೋಲ್ ಬಂಕ್‌ಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಎಷ್ಟು ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್ ಮತ್ತು ಡೀಸಲ್‌ಗೆ ಸೀಮೆಎಣ್ಣೆ ಕಲಬರಕೆ ಮಾಡುತ್ತಿರುವುದನ್ನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಪತ್ತೆ ಮಾಡಿದೆ?

ಇ) ಇದರಿಂದ ನಗರದಲ್ಲಿ ಪರಿಸರ ಮಾಲಿನ್ಯ ಜಾಸ್ತಿಯಾಗುತ್ತಿರುವುದು ನಿಜವೇ?

ಈ) ಈ ಕಲಬೆರಕೆಯನ್ನು ನಿಲ್ಲಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಿ.ಬಸವಣ್ಣೆಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಆಹಾರ ಮತ್ತು ನಾಗರೀಕ ಸರಬಾರಜು ಇಲಾಖೆಯು ಪೆಟ್ರೋಲ್‌ಬಂಕುಗಳನ್ನು ನಿಯಮಿತವಾಗಿ ತನಿಖೆ ನಡೆಸುತ್ತಿದೆ. ಈ ತನಿಕೆಯ ಸಮಯದಲ್ಲಿ ಇಂತಹ ಉದಾಹರಣೆಗಳು ಕಂಡುಬಂದಿಲ್ಲ. 1996-97ನೇ ಸಾಲಿನಲ್ಲಿ 4 ತೈಲ ಕಂಪೆನಿಗಳು ತೈಲ ಕಲಬೆರಕೆ ಸಂಬಂಧದಲ್ಲಿ ಬ್ಲೆಂಗಳೂರು ನಗರದಲ್ಲಿ ತನಿಖೆ ಮಾಡಿದ್ದು ಇದರಲ್ಲಿ 28 ಪೆಟ್ರೋಲ್ ಬಂಕ್‌ಗಳ ಮೇಲೆ ಕ್ರಮ ತೆಗೆದುಕೊಂಡಿದೆ. ಕ್ರಮ ತೆಗೆದುಕೊಂಡ ಬಗ್ಗೆ 4 ತೈಲ ಕಂಪೆನಿಗಳಿಂದ ವಿವರಗಳನ್ನು ತರಿಸಬೇಕಾಗಿರುವುದರಿಂದ ವಿವರಗಳನ್ನು ನಂತರ ಒದಗಿಸಲಾಗುವುದು.

ಆ) ಹೌದು.

ಇ) ಈ ವರ್ಷ ಜುಲೈ ತಿಂಗಳಿನಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಒಟ್ಟು 42 ಅಧಿಕಾರಿ ನೌಕರರುಗಳಿಗೆ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಸಹಯೋಗದೊಂದಿಗೆ ಪೆಟ್ರೋಲ್ ಸೀಮೆಎಣ್ಣೆ ಕಲಬೆರಕೆಯ ಪತ್ತೆ ಹಚ್ಚುವ ವಿಷಯದಲ್ಲಿ ತರಬೇತಿ ಜುಲೈ ತಿಂಗಳಲ್ಲಿ ನೀಡಲಾಗಿದೆ.

ಈ) ತೈಲ ಕಂಪೆನಿಗಳುಕಲಬೆರಕೆ ಪತ್ತೆ ಹಚ್ಚುವ ಬಗ್ಗೆ ತನಿಖೆ ಮಾಡುವುದರ ಜೊತೆಗೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ನೌಕರರು ಅಧಿಕಾರಿಗಳು ಸಹ ಕಾಲಕಾಲಕ್ಕೆ ಮೋಟಾರ್ ಸ್ಪಿರಿಟ್ ಹೈ ಸ್ಪೀಡ್ ಡೀಸೆಲ್ (ಪ್ರಿವೆನ್‌ಷನ್ ಆಫ್ ಮಾಲ್ ಪ್ರಾಕ್ಟೀಸಸ್ ಇನ್ ಸಪ್ಲೈ ಆರಾ ಡಿಸ್ಟ್ರಿಬ್ಯೂಷನ್ಸ್) ಆದೇಶ 1990, ಈ ಆದೇಶದಲ್ಲಿ ಕಾಲಕಾಲಕ್ಕೆ ತನಿಖೆಯನ್ನು ಕೈಗೊಂಡು ತಪ್ಪಿತಸ್ತರ ಮೇಲೆ ಸೂಕ್ತ ಕ್ರಮಕೈಗಳ್ಳುವುದು.